ಕರ್ನಾಟಕ ಸರ್ಕಾರ

# ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ

ಲಲಿತಮಹಲ್ ರಸ್ತೆ, ಮೈಸೂರು - ೫೭೦ ೦೧೧

ಅನಸಾರಾಗ್ರಾಸಂ

ಸಂಖ್ಯೆ: ರಾಗ್ರಾಸಂ/RGPSA/ZP-OFFICIALS/48/2015-16 ದಿನಾಂಕ: 24-11-2015

ಗೆ

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು**

**ಜಿಲ್ಲಾ ಪಂಚಾಯತ್,**

**30 ಜಿಲ್ಲೆಗಳು**

ಮಾನ್ಯರೇ,

ವಿಷಯ: ಜಿಲ್ಲಾ ಪಂಚಾಯತಿಗಳಲ್ಲಿ ಲೆಕ್ಕ ನಿರ್ವಹಿಸುವ ಅಧಿಕಾರಿಗಳು/ಸಿಬ್ಬಂದಿ ವರ್ಗದವರಿಗೆ **"ಲೆಕ್ಕ ಮತ್ತು ಲೆಕ್ಕ ಪರಿಶೋಧನೆ"** ವಿಷಯಕ್ಕೆ ಸಂಬಂಧಿಸಿದ ತರಬೇತಿಗೆ ಶಿಬಿರಾರ್ಥಿಗಳನ್ನು ನಿಯೋಜಿಸುವ ಕುರಿತು

******

2015-16ನೇ ಸಾಲಿಗೆ ತರಬೇತಿ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡಿರುವಂತೆ, ಜಿಲ್ಲಾ ಪಂಚಾಯತಿಗಳಲ್ಲಿ ಲೆಕ್ಕ ನಿರ್ವಹಿಸುವ ಲೆಕ್ಕಾಧಿಕಾರಿಗಳು (AO), ಲೆಕ್ಕಾಧೀಕ್ಷಕರು, ಪ್ರಥಮ ದರ್ಜೆ ಲೆಕ್ಕ ಸಹಾಯಕರು ಹಾಗೂ ದ್ವಿತೀಯ ದರ್ಜೆಯ ಲೆಕ್ಕ ಸಹಾಯಕರುಗಳಿಗೆ ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಸಂಬಂಧಿಸಿದವರಿಗೆ **"ಲೆಕ್ಕ ಮತ್ತು ಲೆಕ್ಕ ಪರಿಶೋಧನೆ"** ವಿಷಯದ ನಾಲ್ಕು ದಿನಗಳ ತರಬೇತಿ ಕಾರ್ಯಕ್ರಮವನ್ನು **ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಬಿವೃದ್ಧಿ ಸಂಸ್ಥೆ, ಮೈಸೂರು-11** ನಲ್ಲಿ ನಾಲ್ಕು ತಂಡಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ಸದರಿ ತರಬೇತಿಯ ತಂಡವಾರು ವಿವರಗಳು ಈ ಕೆಳಕಂಡಂತೆ

| ಮಾಹೆ | ದಿನಾಂಕ | ತಂಡ | ಶಿಬಿರಾರ್ಥಿಗಳ ವಿವರ |
|---|---|---|---|
| ಡಿಸೆಂಬರ್ 2015 | 14/12/2015 – 17/12/2015 | 1 | ಅನುಬಂಧ 1 |
| ಜನವರಿ 2016 | 11/01/2016 – 14/01/2016 | 2 | ಅನುಬಂಧ 2 |
| ಜನವರಿ 2016 | 27/01/2016 – 30/01/2016 | 3 | ಅನುಬಂಧ 3 |
| ಫೆಬ್ರವರಿ 2016 | 23/02/2016– 26/02/2016 | 4 | ಅನುಬಂಧ 4 |

ತಮ್ಮ ಜಿಲ್ಲೆಗೆ ಮೇಲೆ ವಿವರಿಸದಂತೆ ಅನುಬಂಧ 1,2,3,4 ರಂತೆ ಅಧಿಕಾರಿ/ಸಿಬ್ಬಂದಿಗಳನ್ನು ತಂಡವಾರು ಕಡ್ಡಾಯವಾಗಿ ನಿಯೋಜಿಸಬೇಕೆಂದು ಹಾಗೂ ತಾವು ಹೊರಡಿಸುವ ನಿಯೋಜನಾ ಆದೇಶಗಳಲ್ಲಿ ಈ ಕೆಳಕಂಡ ಷರತ್ತುಗಳನ್ನು ಪ್ರತ್ಯೇಕವಾಗಿ ನಮೂದಿಸಿ ನಿಯೋಜನೆಗೊಂಡ ಅಧಿಕಾರಿ/ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಪಾಲಿಸಲು ಆದೇಶಿಸುವುದು.

1. ತರಬೇತಿಗೆ ಕಡ್ಡಾಯವಾಗಿ ಹಾಜರಾಗಲು ಆದೇಶಿಸುವುದು.
2. ತರಬೇತಿಗೆ ನಿಯೋಜಿಸಿ ಹಾಜರಾಗದ ಶಿಬಿರಾರ್ಥಿಗಳಿಗೆ ಡಿ.ಪಿ.ಆರ್ ಆದೇಶ ಸಂಖ್ಯೆ: 148 / ಕೆ.ಟಿ.ಪಿ 2011 (ಪಿ-2) ಬೆಂಗಳೂರು, ದಿನಾಂಕ: 13-09-2012ರ ಪ್ರಕಾರ ತರಬೇತಿಗೆ ಆಗುವಂತಹ ವೆಚ್ಚವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ನಿಮ್ಮನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.
3. ತರಬೇತಿಯ ಅವಧಿಯಲ್ಲಿ ಯಾವುದೇ ರೀತಿಯ ರಜೆಯನ್ನು ತೆಗೆದು ಕೊಳ್ಳಬಾರದು
4. ತರಬೇತಿಯ ಅವಧಿಯಲ್ಲಿ ಉತ್ತಮವಾಗಿ ಶಿಸ್ತಿನಿಂದ ನಡೆದುಕೊಳ್ಳುವುದು.
5. ತಂಡವಾರು ನಿಯೋಜಿಸಿದ ಅಧಿಕಾರಿ/ಸಿಬ್ಬಂದಿಗಳಿಗೆ ಯಾವುದೇ ರೀತಿಯ ತಂಡದಿಂದ ತಂಡಕ್ಕೆ ವರ್ಗಾವಣೆಗೆ ಅವಕಾಶವಿರುವುದಿಲ್ಲ.
6. ತರಬೇತಿ ಮುಗಿದ ನಂತರ ಮೇಲಾಧಿಕಾರಿಗಳಿಗೆ ವರದಿಯನ್ನು ಒಪ್ಪಿಸುವುದು.



ದೂರವಾಣಿ : ೦೮೨೧-೨೫೨೨೫೦೩ ಫ್ಯಾಕ್ಸ್ : ೨೫೪೪೦೭೮ ಈಮೇಲ್ : anssird@rediffmail.com, dir-sird-kamy@nic.in ವೆಬ್‌ಸೈಟ್ : www.sirdmysore.gov.in

ಅನಸಾರಾಗ್ರಾಸಂ



7. ತರಬೇತಿಯ ಸಂಬಂಧವಾಗಿ ಹೆಚ್ಚಿನ ಮಾಹಿತಿಗಾಗಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ವೆಬ್‌ಸೈಟ್ ನೋಡುವುದು ಹಾಗೂ ಸಂಪರ್ಕಕ್ಕೆ ತರಬೇತಿ ಸಂಯೋಜಕರು, ANS SIRD ಇವರ ಮೊಬೈಲ್ ನಂ **9480850107**ಗೆ ಹಾಗೂ ಸಂಸ್ಥೆಯ ಇ-ಮೇಲ್ ಐಡಿ sirdsdaacfc@gmail.com ಸಂಪರ್ಕಿಸಬಹುದಾಗಿದೆ.
8. ತರಬೇತಿಯ ಅವಧಿಯಲ್ಲಿ ಯಾವುದೇ ಕಾರಣಕ್ಕೆ ತರಬೇತಿಯನ್ನು ಅಪೂರ್ಣಗೊಳಿಸತಕ್ಕದಲ್ಲ.

ತಮ್ಮ ವಿಶ್ವಾಸಿ

ನಿರ್ದೇಶಕರು

ಅಡಕ: ಅನುಬಂಧ – 1,2,3,4